# ವಾತ್ಸಲ್ಯ–ಮನುಷ್ಯ ಪ್ರೇಮದ ಬತ್ತದ ಒರತೆಯ ಕಥನ

ರಘುನಾಥ ಚ.ಹ.

'ನೆನಪಿನ ಉಗ್ರಾಣ' ಕೃತಿ ಓದುವ ಸಂದರ್ಭದಲ್ಲಿ ನೆನಪಾಗುವುದು ಎರಡು ಬರವಣಿಗೆ. ಒಂದು, ಕೆ.ಎಸ್. ನಿಸಾರ್ ಅಹಮದ್ ಅವರ 'ಮಾಸ್ತಿ' ಕವಿತೆಯ ಸಾಲುಗಳು. ಇನ್ನೊಂದು, ತ.ಸು. ಶಾಮರಾಯರ 'ಮೂರು ತಲೆಮಾರು' ಕೃತಿ.

ಮಾಸ್ತಿ ಅವರನ್ನು ನಿಸಾರ್ ಚಿತ್ರಿಸುತ್ತಾರೆ:

ಇವರು ನನ್ನೆದುರಲ್ಲಿ ಹಾದುಹೋದಾಗಲೆಲ್ಲ ಹಳ್ಳಿಗಾಡಿನ ಕಡೆಯ ಸುಪ್ರಸನ್ನತೆಯೊಂದು ನಗರಕ್ಕೆ ಸಂದಂತೆ ಬೆಳಗಾಗ ಚಳಿಯಲ್ಲಿ ಬಿಸಿ ನೀರ ಮಿಂದಂತೆ ಎದೆ ಸ್ವಚ್ಛಗೊಳ್ಳುತ್ತದೆ ಹಗುರಕ್ಕೆ ಸಲ್ಲುತ್ತದೆ

'ನೆನಪಿನ ಉಗ್ರಾಣ' ಕೃತಿ ಓದುವಾಗ ನಮ್ಮ ಕಣ್ಣೆದುರು ಸುಳಿವ ಹೊಸಪೇಟೆ ಲಲಿತಮ್ಮನವರ ವ್ಯಕ್ತಿತ್ವ ಕೂಡ ಪ್ರಸನ್ನತೆಯೇ ಮೂರ್ತರೂಪ ತಾಳಿರುವಂತಹದ್ದು. ಬೆಳಗಿನ ಚಳಿಯಲ್ಲಿ ಬಿಸಿ ನೀರಲ್ಲಿ ಮೀಯುವುದು, ಎದೆ ಸ್ವಚ್ಛಗೊಳ್ಳುವುದು ಹಾಗೂ ಹಗುರಕ್ಕೆ ಸಲ್ಲುವುದು – ಈ ಸುಖವನ್ನು ಕೃತಿಯ ಓದು ಕೂಡ ನೀಡುತ್ತದೆ.

ಈ ಪ್ರಸನ್ನಭಾವವನ್ನೂ ಮತ್ತಷ್ಟು ತೀವ್ರತೆಯಲ್ಲಿ ನಮ್ಮ ಅನುಭವಕ್ಕೆ ನೀಡುವಂತಹದ್ದು ತ.ಸು. ಶಾಮರಾಯರ 'ಮೂರು ತಲೆಮಾರು' ಕೃತಿ. ಟಿ.ಎಸ್. ವೆಂಕಣ್ಣಯ್ಯ ಅವರ ಬದುಕು–ಬರಹ–ನಂಬಿಕೆಗಳ ಕುರಿತು ಅವರ ಸಹೋದರ ತ.ಸು. ಶಾಮರಾಯರು ಬರೆದ ಜೀವನ ಚರಿತ್ರೆ ಮಾದರಿಯ ಈ ಕೃತಿ, ವೆಂಕಣ್ಣಯ್ಯನವರ ವ್ಯಕ್ತಿತ್ವದ ಘನತೆಯನ್ನು ನಮಗೆ ಕಾಣಿಸುವಂತಹದ್ದು ಹಾಗೂ ಆ ವ್ಯಕ್ತಿತ್ವದ ಬಗ್ಗೆ ನಮ್ಮಲ್ಲಿ ಕೃತಜ್ಞತೆಯನ್ನು ಮೂಡಿಸುವಂತಹದ್ದು. ಅಂತಹುದೇ ಘನತೆ ಮತ್ತು ಕೃತಜ್ಞತೆಯ ಭಾವ 'ನೆನಪಿನ ಉಗ್ರಾಣ' ಕೃತಿಯನ್ನು ಓದಿದಾಗಲೂ ಉಂಟಾಗುತ್ತದೆ.

ಲಲಿತಮ್ಮನವರ ವ್ಯಕ್ತಿತ್ವದ ಘನತೆಯ ಬಗ್ಗೆ ಹೇಳುವಾಗ, ಮುನ್ನುಡಿಯಲ್ಲಿನ ಎಂ.ಎಸ್. ಆಶಾದೇವಿ ಅವರ ಒಂದು ಮಾತನ್ನು ಉಲ್ಲೇಖಿಸಬೇಕು:

"ನನ್ನ ಮನಸ್ಸಿಗೆ ಸಕಾರಣವಾಗಿ, ಅಕಾರಣವಾಗಿ ಕೆಲವೊಮ್ಮೆ ಖಿನ್ನತೆ ಆವರಿಸಿದಾಗ ಅದರಿಂದ ಹೊರಬರಲು ನಾನು ನೆನೆಯುವ ಕೆಲವೇ ವ್ಯಕ್ತಿತ್ವಗಳಲ್ಲಿ ಶ್ರೀಮತಿ ಲಲಿತಮ್ಮನವರೂ ಒಬ್ಬರು. ಜೀವಿಯು ತನ್ನ ಬಗೆಗೆ ತಾನೇ ಮಾಡಿಕೊಳ್ಳಬೇಕಾದ ಗೌರವ, ಪ್ರೀತಿ ಮತ್ತು ಆತ್ಮವಿಶ್ವಾಸಗಳ ಸಾಕಾರರೂಪದಂತಿದ್ದಾರೆ ಲಲಿತಮ್ಮನವರು".

ಆಶಾದೇವಿ ಅವರ ಮಾತಿನಲ್ಲಿ ಒಂದು ಸೂಚನೆಯಿದೆ. ಅದು, ಲಲಿತಮ್ಮನವರ ವ್ಯಕ್ತಿತ್ವಕ್ಕೆ ಔಷಧ ಗುಣವಿರುವುದು.

ಲಲಿತಮ್ಮನವರು ಹರಿಹರದ ಮಹಿಳಾ ಸಮಾಜದ ಅಧ್ಯಕ್ಷೆ ಆಗಿದ್ದವರು. ಲಯನ್ಸ್ ಕ್ಲಬ್ ಅಧ್ಯಕ್ಷೆ. ಸ್ಕೌಟ್ಸ್ ಅಂಡ್ ಗೈಡ್ಸ್ ಕಮಿಷನರ್. ವಿವಿಧ ಸಾರ್ವಜನಿಕ ಸಂಸ್ಥೆಗಳಲ್ಲಿ ಸಕ್ರಿಯವಾಗಿ ತೊಡಗಿದವರು. ಸಾಹಿತ್ಯ ಪರಿಚಾರಿಕೆ. ಸ್ವತಃ ಲೇಖಕಿ. ಇದೆಲ್ಲದರ ಜೊತೆಗೆ ಅವರೊಳಗೊಬ್ಬ ಸಮಾಜ ವಿಜ್ಞಾನಿ.

'ನನ್ನಂತರಂಗದ ಪರಿವಾರದವರು',